# ಬಬ್ಬೂರು ಕಮ್ಮೆಗಳು–ಒಂದು ವಿಶ್ಲೇಷಣೆ

ಕರ್ನಾಟಕದ ಬ್ರಾಹ್ಮಣ ಸಮುದಾಯಗಳಲ್ಲಿ ಬಬ್ಬೂರು ಕಮ್ಮೆಗಳು ಪ್ರಮುಖವಾದ ಸ್ಥಾನವನ್ನು ಪಡೆದಿದ್ದಾರೆಂಬುದು ಸರ್ವವಿದಿತ. 'ಬಬ್ಬೂರು ಕಮ್ಮೆ' ಎಂಬ ಸಮಾಸ ಪದದಲ್ಲಿ ಎರಡು ಶಬ್ದಗಳಿವೆ; 'ಬಬ್ಬೂರು' ಮತ್ತೆ 'ಕಮ್ಮೆ' ಈ ಎರಡೂ ಶಬ್ದಗಳೂ ಸ್ವಲ್ಪ ವಿಚಿತ್ರವಾಗಿ ಕೇಳಿಸುತ್ತವೆ. ಈ ಎರಡೂ ಶಬ್ದಗಳ ಅರ್ಥ ವಿವರಣೆಯನ್ನು ವಿಶ್ಲೇಷಿಸಿದಾಗ ಅರ್ಥ ಸ್ಪಷ್ಟತೆಯುಂಟಾಗಿ ಎಲ್ಲಿ, ಏನು, ಹೇಗೆ, ಏಕೆ ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ.

ಬಬ್ಬೂರು ಕಮ್ಮೆಗಳ ಬಗ್ಗೆ ಈಗಾಗಲೇ ಕೆಲವು ಹಿರಿಯರು ಪುಸ್ತಕ ರೂಪದಲ್ಲಿ ವಿವರಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ನಾನು ಓದಿರುವ ಮೂರು ಪುಸ್ತಕಗಳ ಹೆಸರುಗಳು ಹೀಗಿವೆ:

1. **ಬಬ್ಬೂರು ಕಮ್ಮೆ ಯಶೋ ಡಿಂಡಿಮ**: ಶ್ರೀ ಬಿ.ಎಸ್ ಕಪನೀಪತಯ್ಯ ಬಿ.ಎ: ನಿವೃತ್ತ ಮ್ಯಾನೇಜರ್
ಅರಮನೆ ಕಛೇರಿ ಮೈಸೂರು.
2. **ಬಬ್ಬೂರು ಕಮ್ಮೆಗಳು– ಒಂದು ಸಿಂಹಾವಲೋಕನ**: ಶ್ರೀ ಅ.ವೆಂ.ನಾಗೇಶ್ ಬೆಂಗಳೂರು.
3. **ಬಭ್ರುಪುರಿಯ ಸ್ಮಾರ್ತಕರ್ಮಿ**: ಶ್ರೀ ಜಾವಗಲ್ ಸೂರ್ಯನಾರಾಯಣ.

ಕನ್ನಡದ ಖ್ಯಾತ ವಿದ್ವಾಂಸರುಗಳು ಹಾಗೂ ಸಂಶೋಧಕರುಗಳಾದ ಡಾ॥ ಎಂ.ಎಂ.ಕಲಬುರ್ಗಿ ಮತ್ತು ಡಾ॥ ಎಂ.ಚಿದಾನಂದ ಮೂರ್ತಿಯವರು 'ಕಮ್ಮೆಗಳು' ಶಬ್ದದ ಬಗ್ಗೆ ಬಿಡಿ ಲೇಖನಗಳನ್ನು ಪ್ರಕಟಿಸಿರುತ್ತಾರೆ.

ಈ ಎಲ್ಲಾ ಗ್ರಂಥಗಳು, ಲೇಖನಗಳು ಮತ್ತು ಇತರ ಲಿಖಿತ ದಾಖಲಾತಿಗಳ ಆಧಾರಗಳ ಮೇಲೆ 'ಬಬ್ಬೂರು ಕಮ್ಮೆ' ಶಬ್ದಾರ್ಥವನ್ನು ನಿರ್ಣಯಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

'ಬಬ್ಬೂರು ಕಮ್ಮೆ' ಎಂಬುದು ಸಮಾಸ ಪದವಾಗಿದ್ದು, ಇದರ ವಿಗ್ರಹ ವಾಕ್ಯ 'ಬಬ್ಬೂರಿನ ಕಮ್ಮೆ'ಗಳು ಎಂದಾಗುತ್ತದೆ. ಮೊದಲು 'ಕಮ್ಮೆ' ಶಬ್ದದ ವಿವರಗಳನ್ನು ಪರಿಶೀಲಿಸಬಹುದು. "ಶ್ರೌತ–ಸ್ಮಾರ್ತ ಕರ್ಮಗಳನ್ನು ನಿಷ್ಕಾಮನೆಯಿಂದ ಆಚರಿಸುವವರು ಕರ್ಮಿಗಳು, ಅದೇ 'ಕಮ್ಮೆ' ಎಂಬ ಶಬ್ದವಾಗಿದೆ"– ಎಂಬುದು ಒಂದು ಪಂಥದವರ ಅಭಿಪ್ರಾಯವಾಗಿದೆ. ಹೀಗಾಗಿ ಇವರು ವಾಸಿಸುತ್ತಿದ್ದ ಪ್ರದೇಶವು 'ಕಮ್ಮೆ' ದೇಶವಾಯಿತೆಂಬುದು ಅವರ ಮುಂದುವರೆದ ಅಭಿಪ್ರಾಯ.

ಖ್ಯಾತ ವಿದ್ವಾಂಸರಾದ ಡಾ॥ ಎಂ.ಚಿದಾನಂದ ಮೂರ್ತಿಯವರು ಸಹ 'ಕಮ್ಮೆ' ಎಂಬುದು ಯಜ್ಞ ಕರ್ಮಿನ್ ಎಂಬ ಶಬ್ದದಿಂದ ಹುಟ್ಟಿದೆ– ಎಂದು ಅಭಿಪ್ರಾಯ ಪಟ್ಟಿದ್ದಾರೆ.('ಪ್ರಜಾವಾಣಿ'29–06–1989)

ಇದಕ್ಕೆ ಪ್ರತಿಕ್ರಿಯೆ ನೀಡುತ್ತಾ ಮತ್ತೊಬ್ಬ ಖ್ಯಾತ ವಿದ್ವಾಂಸರೂ ಶಾಸನ ಶಾಸ್ತ್ರಜ್ಞರೂ ಆಗಿರುವ ಡಾ॥ಎಂ.ಎಂ.ಕಲಬುರ್ಗಿಯವರು"…. ಪ್ರಾಚೀನ ಕಾಲದಲ್ಲಿ ಕಮ್ಮೆನಾಡಿನಿಂದ ಕರ್ನಾಟಕಕ್ಕೆ ಬಂದ ಈ ಬ್ರಾಹ್ಮಣರನ್ನು ಕಮ್ಮೆ ಬ್ರಾಹ್ಮಣರೆಂದು ಇಲ್ಲಿನ ಜನ ಕರೆದಿರಬೇಕು. ಹೀಗೆ ಪ್ರದೇಶವಾಚಿಯಾಗಿ

ಜನವರ್ಗವನ್ನು ಕರೆಯುತ್ತಿದ್ದುದಕ್ಕೆ ವಿವೇಕ ಚಿಂತಾಮಣಿಯಲ್ಲಿ ಬರುವ 'ಕಮ್ಮೆ, ಕನ್ನಡಿಗ, ಆಂಧ್ರ, ದ್ರಾವಿಡವೆಂಬಂತೆ ನಾಲ್ಕು ಜಾತಿಗಳು' ಎಂಬ ಪ್ರದೇಶನಿಷ್ಠ ವರ್ಗೀಕರಣ ನಿದರ್ಶನವೆನ್ನಿಸಿದೆ...." ಎಂದು ಹೇಳಿ 'ಕಮ್ಮೆ' ಎಂಬುದು ಪ್ರದೇಶ ವಾಚಿಕವೇ ಹೊರತು ಕರ್ಮವಾಚಿಕವಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಡಾ॥ಎಂ.ಎಂ.ಕಲಬುರ್ಗಿಯವರು ಮುಂದುವರಿದು "ಕಮ್ಮೆ ಕುಲದವರಾದ ಪಂಪ, ದುರ್ಗಸಿಂಹ, ಜನ್ನ(ಜನಾರ್ದನ) ಬಸವಣ್ಣ, ಅತ್ತಿಮಬ್ಬೆ, ಮೊದಲಾದವರ ಪೂರ್ವಜರು ಕಮ್ಮೆನಾಡಿನಿಂದಲೇ ಬಂದಿರಬೇಕು. ಈ ಕಮ್ಮೆನಾಡು ಈಗಿನ ಆಂಧ್ರ ಪ್ರದೇಶದ ನಲ್ಗೊಂಡ, ಕೃಷ್ಣ ಗುಂಟೂರು ಜಿಲ್ಲೆಗಳ ಭಾಗವೆಂದು ಶಾಸನ ವಿದ್ವಾಂಸರ ಮತವಾಗಿದೆ" ಎಂದು ಯಥಾರ್ಥವನ್ನೇ ಹೇಳಿದ್ದಾರೆ.

ಈ ಅಭಿಪ್ರಾಯಗಳನ್ನು ಪರಿಗಣಿಸಿದರೆ, ಕಮ್ಮೆ ಜನಾಂಗದವರು ವಾಸಿಸುತ್ತಿದ್ದ ಪ್ರದೇಶಕ್ಕೆ 'ಕಮ್ಮೆನಾಡು' ಎಂದು ಹೆಸರು ಬಂದಿರುವುದಲ್ಲ, ಬದಲಿಗೆ ಕಮ್ಮೆನಾಡಿನಿಂದ ಬಂದ ಒಂದು ಜನಾಂಗಕ್ಕೆ 'ಕಮ್ಮೆಗಳು' ಎಂಬ ಹೆಸರು ಬಂದಿರುವುದು ಹೆಚ್ಚು ಸಂಭವನೀಯವಾಗುತ್ತದೆ.

ಹಾಗಾದರೆ ಈ ಕಮ್ಮೆನಾಡು ಯಾವುದು ಎಂಬ ಬಗ್ಗೆ ಈಗ ಪರಿಶೀಲಿಸೋಣ. ಮೇಲ್ಕಂಡ ಪುಸ್ತಕಗಳಲ್ಲಿ ಹೇಳಿರುವ ಹಾಗೆ ಇದು ಆಂಧ್ರಪ್ರದೇಶದ ಈಗಿನ ಕೃಷ್ಣಾ ಜಿಲ್ಲೆಯನ್ನು ಒಳಗೊಂಡ ಕೃಷ್ಣಾ–ಗುಂಡಲಕಮ್ಮ ನದಿಗಳು ಹರಿಯುವ ಪ್ರದೇಶವನ್ನೊಳಗೊಂಡಂತಿರುವ, ಈಗಿನ ನರಸಾಪುರ ಪೇಟ ತಾಲೂಕು, ಬಾಪಟ್ಲಾ ತಾಲೂಕು, ಓಂಗೋಲು ತಾಲೂಕು, ಪ್ರಕಾಶಂ ಜಿಲ್ಲೆಯಲ್ಲಿರುವ ಮಾರ್ಕಾಪುರಂ ತಾಲೂಕಿನ ಭಾಗಗಳನ್ನು ಒಳಗೊಂಡ ಭೂಭಾಗವೇ ಅಂದಿನ 'ಕಮ್ಮೆನಾಡು' ಎಂಬ ರಾಷ್ಟ್ರವಾಗಿತ್ತು.

ಹಳೆಗನ್ನಡದ ಕವಿಗಳು ಕಮ್ಮೆನಾಡನ್ನು ಕುರಿತು ಹೊಗಳಿಕೆಯ ಮಾತುಗಳನ್ನಾಡಿರುವುದನ್ನು ಗಮನಿಸಬಹುದು.

"…….ಅಗ್ಗಳದಗ್ಗದ ಕಮ್ಮೆನಾಡು, ವಿದ್ಯಾಧರ ಲೋಕಮೇನದರ ಪೋಲ್ಮೆಗೆ ಬರ್ಕುಮೆ, ಪೋಲದಿರ್ಕುಮೆ" ಎಂಬುದು 10ನೆಯ ಶತಮಾನದ ಹಳೆಗನ್ನಡ ಕವಿ ಪೊನ್ನನು ತನ್ನ 'ಶಾಂತಿಪುರಾಣ' ದಲ್ಲಿ ನೀಡಿರುವ ವರ್ಣನೆ. ಕಮ್ಮೆನಾಡು ವಿದ್ಯಾಧರ ಲೋಕದ ಹೋಲಿಕೆಗೂ ಸಿಕ್ಕುವುದಿಲ್ಲ ಎಂಬುದು ಈ ನಾಡಿನ ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದ ಹಿರಿಮೆಯನ್ನು ಸಾರುತ್ತದೆ.

" ……. ನೆಗಳ್ದತ್ತು ವೆಂಗಿಮಂಡಲಮದರೊಳ್ ಜಿತಾಸ್ಯ(ನ್ಯ) ವಿಷಯಂ ನೆಗಳ್ದಿರ್ದುದು ಕಂಮೆದೇಶಂ….." – ಎಂದು 10 ನೆಯ ಶತಮಾನದ ಮತ್ತೊಬ್ಬ ಖ್ಯಾತ ಕವಿ ರನ್ನ ಕಮ್ಮೆನಾಡನ್ನು ಪ್ರಶಂಸಿಸುತ್ತಾನೆ. ಅನ್ಯ ವಿಷಯಗಳನ್ನು– ಎಂದರೆ ಇತರ ದೇಶಗಳನ್ನು(ಪ್ರದೇಶಗಳನ್ನು) 'ಜಿತ' ಎಂದರೆ ಗೆದ್ದ ಕಮ್ಮೆದೇಶ ಪ್ರಖ್ಯಾತವಾಗಿತ್ತು ಎಂದು ಹೇಳುತ್ತಾನೆ. ಇದರ ಒಟ್ಟು ಅರ್ಥ ವೆಂಗಿ ಮಂಡಲದಲ್ಲಿ, ಇತರ ಅನೇಕ ಪ್ರದೇಶಗಳನ್ನು ಮೀರಿಸಿ, 'ಕಮ್ಮೆನಾಡು' ಪ್ರಸಿದ್ಧಿ ಪಡೆದಿತ್ತು ಎಂದಿದೆ. ಈ ಕಮ್ಮೆನಾಡಲ್ಲಿ ಮತ್ತು ಸುತ್ತಮುತ್ತ ಕನ್ನಡ ಭಾಷೆಯ ಬಳಕೆಯೂ ಇತ್ತೆಂಬುದು ಈ ಪದ್ಯಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಹೀಗಾಗಿ ಅಲ್ಲಿಂದ ಕನ್ನಡದೇಶಕ್ಕೆ ಬಂದ ಬ್ರಾಹ್ಮಣರ ಭಾಷೆ ಕನ್ನಡವೇ ಆಗಿರುವುದು ಸಾಧ್ಯ.

ಇನ್ನು 'ಬಬ್ಬೂರು' ಎಂಬ ಶಬ್ದದ ಬಗ್ಗೆ ಪರಿಶೀಲಿಸಬಹುದು. ಇದು 'ಕಮ್ಮೆ' ಶಬ್ದದ ವಿಶ್ಲೇಷಣೆಯಷ್ಟು ಸುಲಭವಾಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ 'ಬಬ್ಬೂರು' ಎಂಬ ಗ್ರಾಮವು ಆಂಧ್ರಪ್ರದೇಶದ ಯಾವ ಭಾಗದಲ್ಲೂ ಈಗಲೂ ಇಲ್ಲ, ಹಿಂದೆ ಇದ್ದಿರಬಹುದಾದ ಯಾವ ಸೂಚನೆ–ದಾಖಲೆಗಳೂ ಇಲ್ಲ. ಈ ಕಾರಣದಿಂದ, ಕತ್ತಲೆ ಕೋಣೆಯಲ್ಲಿ, ಇಲ್ಲದ ಕಪ್ಪು ಬೆಕ್ಕನ್ನು ಹುಡುಕಿದಂತೆ– ಆಂಧ್ರದಲ್ಲಿ ಬಬ್ಬೂರನ್ನು ಹುಡುಕುವ ಪ್ರಯತ್ನಗಳು ನಡೆದಿವೆ. ಅಂತಹ ಪ್ರಯತ್ನಗಳನ್ನು ಮೊದಲು ಪರಿಶೀಲಿಸೋಣ:

ಆಂಧ್ರ ಪ್ರದೇಶದ 'ಬೊಬ್ಬಿ' ಎಂಬ ಊರಿನ ಮೊದಲ ಹೆಸರು 'ಬಭ್ರುಪುರಿ' ಎಂದಿದ್ದು ಅದೇ ಕಾಲಕ್ರಮದಲ್ಲಿ 'ಬೊಬ್ಬಿ' ಎಂದಾಯಿತೆಂಬ ಒಂದು ಅಭಿಪ್ರಾಯವಿದೆ. ಈ ಬಭ್ರುಪುರಿಯೇ ಬಭ್ರುಡು ಊರು, 'ಬಬ್ಬೂರು' ಎಂದು ರೂಢಿಗೆ ಬಂತೆಂಬುದೂ ಅದರ ಮುಂದಿನ ಅಭಿಪ್ರಾಯ.

'ಬಭ್ರುಪುರಿ'– ಎಂಬುದು 'ಬೊಬ್ಬಿ' ಆಗುವುದು ಭಾಷಾಶಾಸ್ತ್ರದ ರೀತ್ಯ ಸಾಧ್ಯವಿಲ್ಲದ್ದು. 'ಬಭ್ರುಡೂರು' 'ಬಬ್ಬೂರು' ಆಗಬಹುದು, ಆದರೆ 'ಬಭ್ರುಡೂರು' ಎಂಬ ಹೆಸರಿನ ಊರು ಇಲ್ಲ ಮತ್ತು ಇದ್ದ ಬಗ್ಗೆ ಯಾವುದೇ ಆಧಾರವೂ ಇಲ್ಲ. ಬಬ್ಬೂರು ಕಮ್ಮೆಗಳು ಸೂರ್ಯನ(ಅಗ್ನಿಯ) ಉಪಾಸಕರು. ಸೂರ್ಯದೇವಾಲಯವಿರುವುದು ಆಂಧ್ರದ ಶ್ರೀಕಾಕುಳಂನಲ್ಲಿ. ಆದ್ದರಿಂದ ಅದರ ಸಮೀಪದಲ್ಲಿ 'ಬಭ್ರುಡೂರು' ಇದ್ದಿರಬೇಕು ಎಂಬುದು ಕೇವಲ ದೂರಾನ್ವಯದ ಊಹೆಯಾಗಬಹುದಷ್ಟೆ! ಸಾಮಾನ್ಯವಾಗಿ ಬ್ರಾಹ್ಮಣರ ಎಲ್ಲ ಪಂಗಡದವರೂ ಇತರ ದೇವತೆಗಳೊಂದಿಗೆ ಸೂರ್ಯನನ್ನೂ ಆರಾಧಿಸುತ್ತಾರೆ. ಅಗ್ನಿಯನ್ನು ಉಪಾಸಿಸುತ್ತಾರೆ. ಆದ್ದರಿಂದ ಅದನ್ನು ಕೇವಲ ಕಮ್ಮೆ ಬ್ರಾಹ್ಮಣರಿಗೆ ಸೀಮಿತಗೊಳಿಸುವುದು ಸಾಧುವಾಗುವುದಿಲ್ಲ. ಹೀಗಾಗಿ ಈ ಅರ್ಥಗ್ರಹಿಕೆಯು ಸಾರ್ಥಕವಾಗುವುದಿಲ್ಲ.

ಇನ್ನು 'ಬೊಬ್ಬಿ' ಶಬ್ದಕ್ಕೆ ಜಾಲಿಯ ಮರ, ಗೊಬ್ಬಳಿ ಮರ ಎಂಬ ಅರ್ಥಗಳಿದ್ದು, ಜಾಲಿ ಮರಗಳು ಹೆಚ್ಚಾಗಿ ಬೆಳೆದಿರುವ ಕಾರಣ ಆ ಊರಿಗೆ ಆ ಹೆಸರು ಬಂದಿರುವುದು ಸಹಜವಾಗುತ್ತದೆಯೇ ಹೊರತು 'ಬಭ್ರುಡೂರು' 'ಬೊಬ್ಬಿ' ಆಗಲು ಸಾಧ್ಯವಿಲ್ಲ. ಹಾಗೆಯೇ 'ಬೊಬ್ಬಿಲಿ' ಎಂಬ ಊರಿನ ಬಗ್ಗೆಯೂ ಇದೇ ವಿವರಣೆ ಸಾಕಾಗುತ್ತದೆ. ಬೊಬ್ಬಿಲಿ ಎಂದರೂ ಮುಳ್ಳಿರುವ ಜಾಲಿಯ ಮರ ಎಂದೇ ಅರ್ಥ. ಉದಾಹರಣೆಗೆ ಕುಮಾರವ್ಯಾಸನ ಈ ವಾಕ್ಯವನ್ನು ನೋಡಬಹುದು –"ವನಜ ವನದಲಿ ತುರುಚೆ ಚೂತಮಯ ಕಾನನದಿ ಬೊಬ್ಬುಲಿ, ಭೀಮಸೇನನ ಇರವು ತಮ್ಮೊಳಗೆ" ಇಲ್ಲಿನ ಬೊಬ್ಬುಲಿ ಎಂದರೆ ಮುಳ್ಳು ತುಂಬಿದ ಜಾಲಿಯ ಮರ ಎಂಬುದೇ ಆಗಿದೆ.

ಇನ್ನು, ಸಂಸ್ಕೃತದ 'ಬಬ್ಬೂರ' ಎಂಬ ಶಬ್ದದಿಂದ 'ಬಬ್ಬುರ' ಎಂದಾಗಿ ಈ ಶಬ್ದವೇ 'ಬಬ್ಬೂರು' ಎಂದಾಗಿರಬಹುದೆಂಬ ಒಂದು ಊಹಾತ್ಮಕ ಅಭಿಪ್ರಾಯವಿದೆ.(ಇಲ್ಲಿಯೂ ಈ ಬರ್ಬೂರವೆಂದರೆ ಜಾಲಿಯ ಮರವೆಂದೇ ಅರ್ಥ) ಈ ಬರ್ಬೂರದಿಂದ 'ಬಬ್ಬೂರು' ಆಗಿರಬಹುದೆಂಬ ಊಹೆಗೆ ಅವಕಾಶವಿದ್ದರೂ 'ಬರ್ಬೂರ' ಎಂಬ ಹೆಸರಿನ ಊರು ಇದ್ದಲ್ಲಿ ಅದು 'ಬಬ್ಬೂರು' ಆಗಬಹುದಾಗಿತ್ತು. ಆಗ ಆ ಹೆಸರಿನ ಊರಾಗಲೀ ಪ್ರದೇಶವಾಗಲೀ ಇಲ್ಲದ್ದರಿಂದ ಅದು ಸಹ ಕೇವಲ ಊಹೆಯೇ ಆಗಿ ಉಳಿಯುತ್ತದೆ. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಕಮ್ಮೆ ಹೆಸರಿನ ಹಿಂದೆ 'ಬಬ್ಬೂರು'

ಸೇರಿಕೊಳ್ಳುವ ಮೊದಲು ಬೊಬ್ಬಿ ಕಮ್ಮೆ , ಬೊಬ್ಬುಳಕಮ್ಮೆ, ಬರ್ಬೂರ ಕಮ್ಮೆ ಎಂಬ ಯಾವುದೇ ಪ್ರಯೋಗಗಳು ಯಾವುದೇ ಶಾಸನದಲ್ಲಾಗಲೀ ಸಾಹಿತ್ಯದಲ್ಲಾಗಲೀ ಇರುವುದಿಲ್ಲವೆಂಬುದು.

**ಈ ಎಲ್ಲ ವಿಶ್ಲೇಷಣೆಗಳಿಂದ ಸ್ಪಷ್ಟಪಡುವ ಸಂಗತಿಯೆಂದರೆ:**

1. 'ಬಬ್ಬೂರು' ಎಂಬುದು ಒಂದು ನಿರ್ದಿಷ್ಟವಾದ ಊರಿನ ಹೆಸರೇ ಆಗಿದೆ.

2. ಅದು ಬಬ್ಬಿ, ಬೊಬ್ಬುಳ, ಬರ್ಬೂರ, ಬಬ್ಬುರ ಶಬ್ದಗಳಿಂದ ಬಬ್ಬೂರು ಎಂಬ ಆಂಧ್ರದ ಒಂದು ಊರಿನ ಹೆಸರಾಗಿ ಬದಲಾಗಿರಬಹುದೆಂಬುದು ಕೇವಲ ಊಹೆಯಾಗುತ್ತದಷ್ಟೆ!

3. ಬಭ್ರುಡೂರು ಎಂಬುದು 'ಬಬ್ಬೂರು' ಎಂದು ರೂಪಪರಿವರ್ತನೆ ಹೊಂದಬಹುದಾದರೂ ಆ ಎರಡೂ ಹೆಸರಿನ ಊರು ಆಂಧ್ರದಲ್ಲಿ ಯಾವಾಗಲೂ ಇರಲಿಲ್ಲ.

ಆದ್ದರಿಂದ 'ಬಬ್ಬೂರು' ಎಂಬ ಹೆಸರಿನ ಒಂದು ಊರು ಇರಲೇಬೇಕು, ಹಾಗಾದರೆ ಅದು ಎಲ್ಲಿದೆ? ಅಥವಾ ಎಲ್ಲಿ ಇತ್ತು? ಎಂಬುದನ್ನು ಈಗ ಪರಿಶೀಲಿಸಬೇಕಾಗುತ್ತದೆ. ಇದಕ್ಕೂ ಮೊದಲು 'ಬಬ್ಬೂರು' ಎಂಬುದು 'ಕಮ್ಮೆ' ಶಬ್ದಕ್ಕೆ ಯಾವಾಗಿನಿಂದ ಸೇರಿಕೊಂಡಿತು ಎಂಬುದನ್ನು ನೋಡೋಣ:

1. ಕನ್ನಡ ಭಾಷೆಯಲ್ಲಿ ಮೊದಲ ಬಾರಿಗೆ 'ಕಮ್ಮೆ' ಶಬ್ದ ಬಳಕೆಯಾಗಿರುವುದು ಆದಿಕವಿ ಪಂಪನಿಗೆ ಸಂಬಂಧಿಸಿದಂತೆ. ಅವನ ತಮ್ಮ ಜಿನವಲ್ಲಭನು ಆಂಧ್ರದ ಕರೀಂನಗರ ಜಿಲ್ಲೆಯ 'ಗಂಗಾಧರಂ' ಗ್ರಾಮದ 'ಕುರಿಕ್ಯಾಲ'ವೆಂಬಲ್ಲಿನ 'ಬೊಮ್ಮಲಗುಟ್ಟ'ವೆಂಬ ಕಿರುಬೆಟ್ಟದ ಮೇಲೆ ಕಡೆದಿರುವ ಶಿಲಾಶಾಸನದಲ್ಲಿ ಪಂಪನ ವಂಶಾವಳಿಯನ್ನು ನೀಡುವಾಗ ಹೀಗೆ ಹೇಳಿದ್ದಾನೆ.

"......ವೆಂಗಿನಾಡ ಸಪ್ತಗ್ರಾಮಗಳೊಳಗಣ, ವೆಂಗಿಪರ್ರಕಮ್ಮೆ ಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯ ಶ್ರೀವತ್ಸಗೋತ್ರಂ ಗುಂಡಿಕರ್ರನಿಡುಗೊಂಡೆಯಭಿಮಾನಚಂದ್ರನ ಮರ್ಮಂ ಅಣ್ಣಿಗೆರೆಯ ಜೋಯಿಸ ಸಿಂಘನ ಮರ್ಮಳ್ ಅಬ್ಬಣಬ್ಬೆಯ ಮಗಂ ಪಂಪ......"

ಇದು ಸ್ವತಃ ಪಂಪನ ತಮ್ಮನು ರಚಿಸಿರುವ ಶಾಸನವೇ ಆಗಿರುವಾಗ, ಇದು ಸಹ ಪಂಪನ ಕಾಲಕ್ಕೆ ಎಂದರೆ 10ನೆಯ ಶತಮಾನಕ್ಕೆ(ಕ್ರಿಸ್ತ ಶಕ ೯೫೦) ಸೇರುತ್ತದೆ. ಇಲ್ಲಿ ಪಂಪನ ಪೂರ್ವಿಕರನ್ನು 'ಕಮ್ಮೆ ಬ್ರಾಹ್ಮಣಂ' ಎಂದು ಕರೆದಿದೆ. ಬಬ್ಬೂರು ಕಮ್ಮೆ ಎಂದಾಗಲಿ, ಉಲಿಚಕಮ್ಮೆ ಎಂದಾಗಲೀ ಸಂಬೋಧಿಸಿಲ್ಲ.

2. 11 ನೇ ಶತಮಾನದಲ್ಲಿದ್ದ, ಕರ್ಣಾಟ ಪಂಚತಂತ್ರವೆಂಬ ಗದ್ಯ ಕೃತಿಯನ್ನು ರಚಿಸಿರುವ ದುರ್ಗಸಿಂಹನು ಸಹ 'ಕಮ್ಮೆ' ಬ್ರಾಹ್ಮಣನೆಂದು ಹೇಳಿಕೊಂಡಿದ್ದಾನೆ.

3. ಕ್ರಿ.ಶ. 1209 ರಲ್ಲಿದ್ದ, ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣಗಳೆಂಬ ಖ್ಯಾತ ಕಾವ್ಯಗಳನ್ನು ರಚಿಸಿರುವ ಜನ್ನನು ಸಹ ತನ್ನನ್ನು 'ಕಮ್ಮೆ' ಬ್ರಾಹ್ಮಣನೆಂದೇ ಕರೆದುಕೊಂಡಿದ್ದಾನೆ. ಅವನೇ ಹೇಳಿಕೊಂಡಿರುವ ಮಾತುಗಳು ಹೀಗಿವೆ:

**"ಜನ್ನಂ, ಕಮ್ಮೆ ಕುಲದ ತೊಡವಿನ ರನ್ನಂ"(ಯಶೋಧರ ಚರಿತ್ರೆಯಲ್ಲಿ), "ಶಂಕರ ಪುತ್ರಂ ಕವಿ ಕಮ್ಮೆ ವಂಶನಧಿಕಜ್ಞಂ ಕಾಶ್ಯಪಂ....... ಜನ್ನನಂ"** (ಅನಂತನಾಥ ಪುರಾಣದಲ್ಲಿ), **"ಕಮ್ಮೆ ಕುಲಾಂಭೋರುಹಭಾನು ಜನ್ನಮರಸಂ"**(ಅನಂತನಾಥ ಪುರಾಣ), ('ಜನ್ನನು ಜೈನನೇ?' ಎಂಬ ಡಾ॥ ಎ.ವಿ. ಪ್ರಸನ್ನ ಅವರ ಲೇಖನದಲ್ಲಿ ಈ ಬಗ್ಗೆ ಹೆಚ್ಚಿನ ವಿವರಗಳನ್ನು ನೋಡಬಹುದು.)

4. 12 ನೆಯ ಶತಮಾನದಲ್ಲಿದ್ದ ಬಸವಣ್ಣನವರು ಸಹ 'ಕಮ್ಮೆ' ಬ್ರಾಹ್ಮಣರಾಗಿದ್ದು, 13ನೆಯ ಶತಮಾನದಲ್ಲಿ ಅವರ ಕುರಿತಾದ 'ಬಸವರಾಜ ದೇವರ ರಗಳೆ' ಎಂಬ ಕಾವ್ಯವನ್ನು ರಚಿಸಿದ ಹರಿಹರ ಹೀಗೆ ಹೇಳುತ್ತಾನೆ:

**ಅಗ್ರೇಶ್ವರಂ ಕಮ್ಮೆಕುಲದಿಂದ ಮೆರೆದಿರ್ಪ ವಿಪ್ರನಿರ್ಪಂ ಮಾದಿರಾಜನಾತನಸತಿಯು, ಅಪ್ರತಿಮ ಮಾದಾಂಬೆಯೆಂದೆಂಬ ಗುಣವತಿಯು"** ಇವರ ಮಗನೇ ಬಸವಣ್ಣ.(ಬಸವರಾಜ ದೇವರ ರಗಳೆಯನ್ನು ರಚಿಸಿದ ಹರಿಹರ ಮತ್ತು ಅವನ ಸೋದರಳಿಯ, ಹರಿಶ್ಚಂದ್ರ ಕಾವ್ಯದ ಕರ್ತೃ ರಾಘವಾಂಕ ಬ್ರಾಹ್ಮಣರೇ ಆಗಿದ್ದು, ಅವರುಗಳು ಸಹ ಕಮ್ಮೆಗಳಾಗಿರುವ ಸಾಧ್ಯತೆ ಇದೆ.)

5. ಅಭಿನವ ಮಂಗರಾಜನು(1398) ಸಹ 'ಕಮ್ಮೆ' ಬ್ರಾಹ್ಮಣ. ಅವನು ತನ್ನ ಮಂಗರಾಜ ನಿಘಂಟಿನಲ್ಲಿ **"ಬ್ರಾಹ್ಮಣರೊಳು ಕಮ್ಮೆ ಮೊದಲಾದ ಎಂಟು ಕುಲಮಕ್ಕುಂ"** ಎಂದು ಹೇಳಿರುತ್ತಾನೆ. ಪ್ರಾಸಂಗಿಕವಾಗಿ ಬ್ರಾಹ್ಮಣರ ಒಳಪಂಗಡಗಳಲ್ಲಿ 'ಕಮ್ಮೆ' ಕುಲವೇ ಪ್ರಧಾನವಾದುದೆಂಬುದು ಈ ಮಾತಿನಿಂದ ಸ್ಪಷ್ಟವಾಗುತ್ತದೆಂಬುದನ್ನು ಗಮನಿಸಬೇಕು.

ಈ ಸಂದರ್ಭದಲ್ಲಿ ಮತ್ತೊಂದು ಪ್ರಮುಖ ವಿಚಾರವನ್ನು ಗಮನಿಸಬೇಕು. ಕನ್ನಡ ಸಾಹಿತ್ಯದ ಅಸಂಖ್ಯಾತ ಪ್ರಾಚೀನ ಕವಿಗಳಲ್ಲಿ ಮೇಲೆ ತಿಳಿಸಿದಂತೆ ಅನೇಕ ಬ್ರಾಹ್ಮಣ ಕವಿಗಳು ತಮ್ಮನ್ನು 'ಕಮ್ಮೆ' ಕುಲದವರೆಂದು ಬಹು ಹೆಮ್ಮೆಯಿಂದ ಕರೆದುಕೊಂಡಿದ್ದಾರೆ. ಇದನ್ನು ಗಮನಿಸಿದಾಗ ಪ್ರಾಚೀನ ಕರ್ನಾಟಕದ ಬ್ರಾಹ್ಮಣರಲ್ಲಿ ಅತಿ ಹೆಚ್ಚಿನ ಸ್ಮಾರ್ತ ಪಂಗಡದವರು ಕಮ್ಮೆಗಳೇ ಆಗಿದ್ದರೆಂದು ಊಹಿಸಬಹುದಾಗಿದೆ.

ಇಲ್ಲಿ ಇಷ್ಟು ಜನ ಕವಿಗಳ ಹೆಸರುಗಳನ್ನು ಏಕೆ ಉದ್ಧರಿಸಲಾಯಿತೆಂದರೆ, ಅವರೆಲ್ಲರೂ ತಮ್ಮ ಉಪಜಾತಿಯನ್ನು ಹೇಳಿಕೊಳ್ಳುವಾಗ ಕೇವಲ 'ಕಮ್ಮೆ'ಯೆಂದೋ, ಕಮ್ಮೆ ಬ್ರಾಹ್ಮಣನೆಂದೋ ಹೇಳಿಕೊಂಡಿದ್ದಾರೆಯೇ ಹೊರತಾಗಿ 'ಬಬ್ಬೂರು ಕಮ್ಮೆ' 'ಉಲಿಚಕಮ್ಮೆ' ಎಂದು ಯಾರೊಬ್ಬರೂ ಕರೆದುಕೊಂಡಿಲ್ಲ. ಇದರ ಅರ್ಥವೆಂದರೆ- ಆ ಕಾಲಕ್ಕೆ ಬಬ್ಬೂರು ಕಮ್ಮೆಗಳೆಂಬ ಅಥವಾ ಉಲಿಚ ಕಮ್ಮೆಗಳೆಂಬ ವಿಭಾಗವಿರದೇ ಕೇವಲ 'ಕಮ್ಮೆ'ಯೆಂಬ ಪಂಗಡದ ಹೆಸರು ಮಾತ್ರ ಪ್ರಚಲಿತವಾಗಿತ್ತು ಹಾಗೂ ಆನಂತರದ ವರ್ಷಗಳಲ್ಲಿ 'ಬಬ್ಬೂರು' ಎಂಬುದು ಕಮ್ಮೆಯ ಹಿಂದೆ ಸೇರಿಕೊಂಡಿತು.

ಹಾಗಾದರೆ ಯಾವ ಸಂದರ್ಭದಲ್ಲಿ 'ಬಬ್ಬೂರು' ಎಂಬ ಊರಿನ ಹೆಸರು 'ಕಮ್ಮೆ'ಗೆ ಸೇರಿಕೊಂಡಿತೆಂಬ ಬಗ್ಗೆ ಪ್ರಾಚೀನ ಸಾಹಿತ್ಯವನ್ನು ಪರಿಶೀಲಿಸಿದಾಗ ಒಂದು ಅಂಶ ಸ್ಪಷ್ಟಪಡುತ್ತದೆ:

ಮೊಟ್ಟಮೊದಲ ಬಾರಿಗೆ 'ಕಮ್ಮೆ' ಶಬ್ದದ ಹಿಂದೆ 'ಬಬ್ಬೂರು' ಸೇರಿರುವುದು ಸುಮಾರು ಕ್ರಿ.ಶ.1750ರಲ್ಲಿ. 'ಬಬ್ಬೂರು ರಂಗ' ಎಂಬ ಕವಿ 'ಅಂಬಿಕಾವಿಜಯ" ಮತ್ತು 'ಪರಶುರಾಮ ರಾಮಾಯಣ'ವೆಂಬ ಷಟ್ಪದೀ ಕಾವ್ಯಗಳನ್ನು ರಚಿಸಿರುತ್ತಾನೆ. ಈ ಕಾವ್ಯಗಳಲ್ಲಿ ಅವನೇ ಹೇಳಿಕೊಂಡಿರುವಂತೆ "ಇವನು ಸ್ಮಾರ್ತ ಬ್ರಾಹ್ಮಣನು, ಶೌನಕ ಗೋತ್ರದವನು. ಇವನು ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ: ಕಮ್ಮೆಯ ತಿಪ್ಪಣ್ಣ, ಮಗ ರಂಗ, ಮಗ ಮಾಮಗ, ಮಗ ಚಿಕ್ಕಯ್ಯ, ಮಗ ವೇದಾವತಿ ತೀರದಲ್ಲಿರುವ ಘನಪುರಿಯ(ಹಿರಿಯೂರಿನ) ಕರಣಿಕಾಗ್ರಣಿ ರಂಗ, ಅವನ ಹೆಂಡತಿ ರುಕ್ಮಿಣಿ, ಮಗ ಕವಿ ಬಬ್ಬೂರು ರಂಗ, ಇವನ ಸ್ಥಳ ಹಿರಿಯೂರಿಗೆ ಸಮೀಪದಲ್ಲಿರುವ ಬಬ್ಬೂರು; ಆ ಬಬ್ಬೂರು ರಂಗನಾಥನೇ ಈತನ ಕುಲದೈವವು....."(ಕರ್ನಾಟಕ ಕವಿ ಚರಿತೆ ತೃತೀಯ

ಸಂಪುಟ- ಗ್ರಂಥಕರ್ತರು: ಡಾ॥ ಆರ್. ನರಸಿಂಹಾಚಾರ್ಯ. ಪ್ರಕಟಣೆ: ಕನ್ನಡ ಸಾಹಿತ್ಯ ಪರಿಷತ್ತು- 2005)

ಈ ಬಬ್ಬೂರು ರಂಗನ ವಂಶದ ಮೂಲಪುರುಷನಾದ 'ತಿಪ್ಪಣ್ಣ'ನನ್ನು 'ಕಮ್ಮೆಯ ತಿಪ್ಪಣ್ಣ'ನೆಂದು ಕರೆದಿರುವುದರಿಂದ ಬಬ್ಬೂರು ರಂಗನು ಕಮ್ಮೆ ಬ್ರಾಹ್ಮಣನೆಂದೂ ಆನಂತರ ಇದೇ ರಂಗನು ತನ್ನನ್ನು 'ಬಬ್ಬೂರು ರಂಗ' ನೆಂದು ಕರೆದುಕೊಂಡಿರುವುದರಿಂದ ಇವನು 'ಬಬ್ಬೂರು ಕಮ್ಮೆ ರಂಗ' ನೆಂದು ಸ್ಪಷ್ಟವಾಗಿ ತಿಳಿಯಬಹುದು. ಹೀಗೆ "ಬಬ್ಬೂರು ಕಮ್ಮೆ" ಎಂಬ ಹೆಸರಿಗೆ ಈ ಬಬ್ಬೂರು ಕಮ್ಮೆ ರಂಗನೇ ಪ್ರವರ್ತಕನೆಂದೂ ಹೇಳಬಹುದು. ಇವನು ಕ್ರಿ.ಶ 1750 ರಲ್ಲಿದ್ದುದರಿಂದ ಅಲ್ಲಿಂದೀಚೆಗೆ ಕಮ್ಮೆ ಜನಾಂಗದ ಒಂದು ಶಾಖೆಗೆ 'ಬಬ್ಬೂರು ಕಮ್ಮೆ'ಗಳೆಂಬ ಹೆಸರು ಬಂದಿದೆಯೆಂಬುದು ಸ್ಪಷ್ಟವಾದ ಅಭಿಪ್ರಾಯ.

ಈ ಎಲ್ಲ ಮಾಹಿತಿಗಳನ್ನು ವಿಶ್ಲೇಷಿಸಿದರೆ, ಕ್ರಿ.ಶ. 1750ರವರೆಗೆ 'ಬಬ್ಬೂರು ಕಮ್ಮೆ'ಗಳೆಂಬ ಶಬ್ದ ಪ್ರಯೋಗವೇ ಇರಲಿಲ್ಲ. 10ನೆಯ ಶತಮಾನದಲ್ಲಿ ಆಂಧ್ರದ ಕುರಿಕ್ಯಾಲ ಶಾಸನದಲ್ಲಿ ಮೊದಲು ಕಾಣಿಸಿಕೊಂಡ 'ಕಮ್ಮೆ ಬ್ರಾಹ್ಮಣಂ' ಎಂಬ ಶಬ್ದ 1750ರವರೆಗೂ ಕಮ್ಮೆ, ಕಮ್ಮೆಕುಲ, ಕಮ್ಮೆ ಬ್ರಾಹ್ಮಣ ಮುಂತಾದ ರೂಪಗಳಲ್ಲಿದ್ದುದು 1750ರಲ್ಲಿದ್ದ ಬಬ್ಬೂರು ರಂಗನ ಕಾವ್ಯದಲ್ಲಿ ಮೊಟ್ಟಮೊದಲಿಗೆ 'ಬಬ್ಬೂರು ರಂಗ'ಎಂಬ ಹೆಸರಿನಲ್ಲಿ 'ಬಬ್ಬೂರು' ಎಂಬ ಊರಿನ ಶಬ್ದ ಸೇರಿಕೊಂಡಿತು. ಹೀಗಾಗಿ ಈ 'ಬಬ್ಬೂರು' ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ರಂಗನಾಥನ ಕ್ಷೇತ್ರವಾದ ಬಬ್ಬೂರು ಗ್ರಾಮವೇ ಹೊರತು ಬೇರೆಯಲ್ಲವೆಂದು ಸುಸ್ಪಷ್ಟವಾಗುತ್ತದೆ.

ಬಹುಶಃ ಬಬ್ಬೂರು ರಂಗನ ಕಾಲದಲ್ಲಿ ಬಬ್ಬೂರಿನ ಆಸುಪಾಸಿನಲ್ಲಿದ್ದ ಹಿರಿಯೂರು, ಹೊಸದುರ್ಗ, ಚಿತ್ರದುರ್ಗ ಮುಂತಾದ ಪ್ರಾಂತ್ಯಗಳ ಕಮ್ಮೆಗಳು ತಮ್ಮನ್ನು ಬಬ್ಬೂರು ಕಮ್ಮೆಗಳೆಂದು ಕರೆದುಕೊಂಡು ಕ್ರಮೇಣ ಇದು ತುಂಗಭದ್ರೆಯ ದಕ್ಷಿಣದಲ್ಲಿದ್ದ ಈಗಿನ ಹಳೇ ಮೈಸೂರು ಪ್ರಾಂತ್ಯದಲ್ಲಿದ್ದ ಎಲ್ಲ ಕಮ್ಮೆಗಳೂ ತಮ್ಮನ್ನು ಬಬ್ಬೂರು ಕಮ್ಮೆಗಳೆಂದು ಕರೆದುಕೊಂಡರು. ಬಹುಶಃ ಆನಂತರ ಆಂಧ್ರದ ಕರ್ನೂಲು ಜಿಲ್ಲೆಯ 'ಉಲಿಚಾಲ' ಪ್ರದೇಶದಿಂದ ಬಂದ ಕಮ್ಮೆಗಳು ತಮ್ಮನ್ನು ಉಲಚಾಲ ಕಮ್ಮೆಗಳೆಂದು ಕರೆದುಕೊಂಡು, ಅದೇ ಈಗ 'ಉಲಚ ಕಮ್ಮೆ' ಯಾಗಿ ಪ್ರಚಾರದಲ್ಲಿದೆ; ಅಥವಾ ನಮ್ಮ ರಾಜ್ಯದ ತುಮಕೂರು ಮತ್ತು ಇತರ ಪಕ್ಕದ ಜಿಲ್ಲೆಗಳ ಕೆಲವೇ ಪ್ರದೇಶಗಳ ಕಮ್ಮೆ ಜನಾಂಗದವರು ತಮ್ಮನ್ನು ಬಬ್ಬೂರು ಕಮ್ಮೆಗಳೆಂದು ಗುರುತಿಸಿಕೊಳ್ಳಲು ಯಾವುದಾದರೂ ನಿರ್ದಿಷ್ಟ ಕಾರಣಗಳಿಂದ ಸಾಧ್ಯವಾಗದೇ ತಾವು ಎಲ್ಲಿಂದ ಬಂದವರೆಂಬುದು ಸ್ಪಷ್ಟತೆ ಇದ್ದ ಕಾರಣದಿಂದ ಉಲಚಾಲ ಕಮ್ಮೆಗಳೆಂದು ಕರೆದುಕೊಂಡಿರಬಹುದು. ಇದರಲ್ಲಿ ತಾವು ಬಬ್ಬೂರಿನವರಲ್ಲ, ಆಂಧ್ರ ಮೂಲದವರು ಎಂದು ಹೇಳಿಕೊಳ್ಳುವ ಉದ್ದೇಶವೂ ಇರಬಹುದು. ಹೀಗಾಗಿ ಕರ್ನಾಟಕದಲ್ಲಿ 'ಬಬ್ಬೂರು ಕಮ್ಮೆ','ಉಲಿಚಕಮ್ಮೆ' ಎಂಬ ಎರಡು ಪಂಗಡಗಳು ಕಮ್ಮೆಗಳಲ್ಲಿ ಉಂಟಾದವು.

ಇಲ್ಲಿ ಉದ್ಭವಿಸುವ ಮತ್ತೊಂದು ಪ್ರಶ್ನೆಯೆಂದರೆ ಬೇರೆ ಪ್ರದೇಶಗಳಿಂದ ವಲಸೆ ಬಂದವರು ತಮ್ಮ ಗುರುತಿಗಾಗಿ ಬಹುತೇಕ ತಾವು ಬಿಟ್ಟುಬಂದ ಊರಿನ ಹೆಸರನ್ನು ಇಟ್ಟುಕೊಳ್ಳುವುದು ವಾಡಿಕೆ. ಹಾಗಿರುವಾಗ ಬಬ್ಬೂರು ಕಮ್ಮೆಗಳು ತಾವು ಬಿಟ್ಟು ಬಂದ, ಆಂಧ್ರ ರಾಜ್ಯದಲ್ಲಿರಬಹುದಾದ ಊರಿನ

ಹೆಸರನ್ನು ಬಿಟ್ಟು ತಾವು ಸೇರಿದ ಕರ್ನಾಟಕ ರಾಜ್ಯದ ಒಂದು ಊರಿನ ಹೆಸರನ್ನು ಇಟ್ಟುಕೊಳ್ಳುತ್ತಾರೆಯೇ? ಎಂಬುದು. ಈ ಕಾರಣವನ್ನೇ ಪ್ರಧಾನವಾಗಿಟ್ಟುಕೊಂಡು 'ಬಬ್ಬೂರು' ಎಂಬುದು ಆಂಧ್ರದಲ್ಲಿ ಇದ್ದಿರಬಹುದಾದ ಒಂದು ಊರಾಗಿರಬೇಕೆಂದು ಕೇವಲ ಊಹೆಯಿಂದ ತೀರ್ಮಾನಿಸುವುದಕ್ಕೆ ಕಾರಣವಾಗಿದೆ.

ಆದರೆ ವಾಸ್ತವವಾಗಿ ಇದೇ ಸತ್ಯವಲ್ಲ. ಬಿಟ್ಟುಬಂದ ಊರಿನ ಹೆಸರನ್ನು ಸೇರಿಸಿಕೊಳ್ಳುವುದು ಸಾಮಾನ್ಯವಾದರೂ ಸೇರಿದ ಊರಿನ ಹೆಸರನ್ನು ಇಟ್ಟುಕೊಂಡಿರುವ ಅನೇಕ ಉದಾಹರಣೆಗಳಿವೆ. ಸ್ಮಾರ್ತ ಪಂಗಡದ ಮತ್ತೊಂದು ಸಮುದಾಯವಾದ ಸಂಕೇತಿಗಳ ಉದಾಹರಣೆಯನ್ನು ಗಮನಿಸೋಣ, ಅವರ ಮೂಲಸ್ಥಾನ 'ಶಂಗೋಟ್ಟೈ' ಎಂಬ ತಮಿಳುನಾಡಿನ ಒಂದು ಊರು. ಅವರು ಕರ್ನಾಟಕಕ್ಕೆ ಬಂದಮೇಲೆ ಎರಡು ಗುಂಪುಗಳಾದರು; ಒಂದು ಗುಂಪು ಬೆಟ್ಟದಪುರದ ಸಂಕೇತಿಗಳಾದರು; ಇನ್ನೊಂದು ಗುಂಪು 'ಕೌಶಿಕ ಸಂಕೇತಿಗಳಾದರು. ಇಂತಹ ಇನ್ನೂ ಎಷ್ಟೋ ಉದಾಹರಣೆಗಳಿವೆ. ಹಾಗೆಯೆ ಬಬ್ಬೂರಿನಲ್ಲಿದ್ದ ಕಮ್ಮೆಗಳು ಬಬ್ಬೂರು ಕಮ್ಮೆಗಳಾದರು. ಆಗ ಆ ಊರಿಗಿದ್ದ ಸ್ಥಾನಮಾನಗಳ ಕಾರಣದಿಂದಾಗಿ, 'ಬಬ್ಬೂರು ರಂಗನೆಂಬ' ಕವಿಯ ಹಿರಿತನದ ಕಾರಣದಿಂದಾಗಿ ತಾವು ಬಬ್ಬೂರಿನ ಕಮ್ಮೆಗಳೆಂದು ಕರೆದುಕೊಂಡು ಅದೇ ಸಂಪ್ರದಾಯದ ಅಕ್ಕಪಕ್ಕದ, ನಂತರ ಕ್ರಮೇಣ ದೂರದೂರಿನ ಕಮ್ಮೆಗಳು ಸಹ ಹಾಗೆಯೇ ಗುರುತಿಸಿಕೊಂಡಿರುವ ಸಾಧ್ಯತೆಯೇ ಹೆಚ್ಚು.

ಆಗಿನ ಕಾಲಕ್ಕೆ 'ಬಬ್ಬೂರು' ಒಂದು ಪ್ರಮುಖವಾದ ಸ್ಥಳವಾಗಿದ್ದು, ಈ ಊರಿನ ಬಗ್ಗೆ ಬಬ್ಬೂರು ರಂಗನು ತನ್ನ ಕಾವ್ಯದಲ್ಲಿ ಹೆಮ್ಮೆಯಿಂದ ಪ್ರಸ್ತಾಪಿಸಿದ್ದಾನೆ. "ಬೊಬ್ಬೂರವಾಸ ವಸಂತ ಮಾಧವನೆಮಗೀಗೆ ಸನ್ಮತಿಯ ಮಂಗಳವನು"- ಎಂದು ಪರಶುರಾಮ ರಾಮಾಯಣ ಕಾವ್ಯದ ಮೊದಲ ಪದ್ಯದಲ್ಲಿ ಅಲ್ಲಿನ 'ವಸಂತ ಮಾಧವ' ದೇವರನ್ನು ಪ್ರಾರ್ಥಿಸಿದ್ದಾನೆ. ಆನಂತರ 'ಈ ಪುರದ (ಹಿರಿಯೂರಿನ) ಸೇರುವೆಯ ಕರಣಿಕಂವರ ಶೌನಕಾಖ್ಯನಾದಾ ಋಷಿಯ ಗೋತ್ರಜಂ ಬಳಿಕಪ್ಪ ರಂಗಜಂ(ಕರಣಿಕಾಗ್ರಣಿ ರಂಗನ ಮಗ) ಪೇಳ್ವೆನಾಂ ಬೊಬ್ಬೂರನು' ಎಂದು ಪರಶುರಾಮ ರಾಮಾಯಣ ಕಾವ್ಯದ ಪೀಠಿಕಾ ಪ್ರಕರಣದ 21ನೆಯ ಷಟ್ಪದಿಯಲ್ಲಿ ಹೇಳಿದ್ದಾನೆ. ಆದ್ದರಿಂದ ಕಮ್ಮೆ ಜನಾಂಗದ ಒಂದು ಶಾಖೆಯು ತಮ್ಮನ್ನು ಆ ಊರಿನ ಹೆಸರಿನಿಂದ ಕರೆದುಕೊಂಡಿರುವುದು ಅಸಂಭವವೇನಲ್ಲ! ಈ ಎಲ್ಲ ಕಾರಣಗಳಿಂದ, ಬಬ್ಬೂರು ಕಮ್ಮೆಗಳು ಎಂದರೆ, ಆಂಧ್ರಪ್ರದೇಶದ ಕಮ್ಮನಾಡಿನಿಂದ ಕರ್ನಾಟಕಕ್ಕೆ ಬಂದು ನೆಲೆಸಿದ ಕಮ್ಮೆಗಳೆಂದೂ ಕಾಲಕ್ರಮೇಣ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಬಬ್ಬೂರಿನ ಪ್ರಭಾವದಿಂದಾಗಿ ಬಬ್ಬೂರು ಕಮ್ಮೆಗಳಾದರೆಂದೂ ನಿರ್ಣಯಿಸುವುದು ಸೂಕ್ತವಾಗಿರುತ್ತದೆ.

ಈಗಲೂ ಬಬ್ಬೂರು ಕಮ್ಮೆಗಳು ಹೆಚ್ಚಾಗಿ ನೆಲಸಿರುವ ಸ್ಥಳಗಳಲ್ಲಿ ಚಿತ್ರದುರ್ಗ ಜಿಲ್ಲೆಯೂ ಒಂದೆಂಬುದು ಇಲ್ಲಿ ಪರಿಗಣಿಸಬೇಕಾದ ಅಂಶವಾಗಿದೆ.

ಹೀಗಾಗಿ ಆಂಧ್ರಪ್ರದೇಶದಲ್ಲಿ ಎಂದೂ ಇಲ್ಲದಿದ್ದ, ಈಗಲೂ ಇಲ್ಲದಿರುವ ಬಬ್ಬೂರು, ಬಭ್ರುಡೂರು, ಬಭ್ರುಪುರಿ ಮುಂತಾದ ಊರಿನ ಹೆಸರುಗಳನ್ನು ಕೇವಲ ಊಹೆಯಿಂದ ಆಧರಿಸಿ

‘ಆಂಧ್ರದ ಬಬ್ಬೂರಿನಿಂದ ಬಂದ ಬಬ್ಬೂರು ಕಮ್ಮೆಗಳೆಂಬ ಅಭಿಪ್ರಾಯವನ್ನು ಬಿಟ್ಟು ಆಂಧ್ರದಿಂದ ಬಂದ ಕಮ್ಮೆ ಬ್ರಾಹ್ಮಣರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ‘ಬಬ್ಬೂರು’ ಗ್ರಾಮದ ಹೆಸರಿನಿಂದ ಬಬ್ಬೂರು ಕಮ್ಮೆಗಳಾದರು ಎಂಬ ಸಂಭಾವ್ಯವಾದ ವಿಚಾರವನ್ನು ಸ್ವೀಕರಿಸುವುದೇ ಸರಿಯಾದ ಮಾರ್ಗವೆಂಬ ಸ್ಪಷ್ಟವಾದ, ಸಾಧಾರವಾದ ಅಭಿಪ್ರಾಯದೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ.

**ಡಾ|| ಎ.ವಿ ಪ್ರಸನ್ನ**

**ಎಂ.ಎ.,ಎಲ್.ಎಲ್.ಬಿ., ಡಿ’ಲಿಟ್ ಕೆ.ಎ.ಎಸ್.(ರಿ.)**